**ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯ, ಬೇಲೂರು.**

**ಸಿ ಸಿ ಸಂಖ್ಯೆಃ 77/2018**

| | | |
|---|---|---|
| ಹೆಸರು | ಉಮೇಶ್ | ದಿಃ 24-11-2023 |
| ತಂದೆಯ ಹೆಸರು | ಸಿದ್ದೇಗೌಡ | |
| ವಯಸ್ಸು | 40 ವರ್ಷ | ಪಿಡಬ್ಲ್ಯುಃ 3 |
| ಉದ್ಯೋಗ | ಅಬಕಾರಿ ಪೇದೆ, ಅಬಕಾರಿ ಉಪ ಆಯುಕ್ತರ ಕಚೇರಿ ಹಾಸನ | ಸಿಡಬ್ಲ್ಯುಃ 3 |
| ವಾಸ | ಹಾಸನ | ವಿಧಿಬದ್ಧವಾಗಿ ಪ್ರಮಾಣೀಕರಿಸಲಾಯಿತು. |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

1. ನಾನು 2016 ನೇ ಇಸವಿಯಿಂದ ಇಲ್ಲಿಯವರೆಗೂ ಹಾಸನದ ಅಬಕಾರಿ ಉಪಆಯುಕ್ತರವರ ಕಚೇರಿಯಲ್ಲಿ ಅಬಕಾರಿ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ03-12-2016 ರಂದು ಸಂಜೆ 4.15 ರ ಸಮಯದಲ್ಲಿ ಬೇಲೂರು ತಾಲೂಕು ಅರೇಹಳ್ಳಿ ಹೋಬಳಿ ದಬ್ಬೆ ಗ್ರಾಮದಲ್ಲಿ ದೇವರಾಜೇಗೌಡ ಎಂಬುವವರು ಅಕ್ರಮವಾಗಿ ಕಳ್ಳಭಟ್ಟಿ ದಾಸ್ತಾನು ಹೊಂದಿರುತ್ತಾರೆ ಎಂದು ನಮ್ಮ ಅಬಕಾರಿ ಉಪನಿರೀಕ್ಷಕರಿಗೆ ಮೌಖಿಕವಾಗಿ ಬಂದ ಮಾಹಿತಿ ಮೇರೆಗೆ ನ ನಾವು ಚಾಸಾ6 ರವರೊಂದಿಗೆ ದಬ್ಬೆ ಗ್ರಾಮಕ್ಕೆ ಹೋದೆವು. ದಬ್ಬೆ ಗ್ರಾಮದ ಗ್ರಾಮ ಪಂಚಾಯಿತಿ ಮುಂಭಾಗದಲ್ಲಿ ಚಾಸಾ-1 ಮತ್ತು 2 ರವರನ್ನು ದಾಳಿ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ಕೋರಿದಾಗ ಅವರು ಒಪ್ಪಿ ನಮ್ಮ ಜೊತೆ ಬಂದಿರುತ್ತಾರೆ. ನಂತರ ದೇವರಾಜೇಗೌಡರವರ ಮನೆಗೆ ತೆರಳಿದಾಗ ಸದರಿ ದೇವರಾಜೇಗೌಡ ಮನೆಯಲ್ಲಿ ಹಾಜರಿದ್ದರು. ಮಾನ್ಯ ಘನ ನ್ಯಾಯಾಲಯದಿಂದ ಶೋಧನ ವಾರೆಂಟ್ ಪಡೆಯಲು ಕಾಲವಕಾಶ ಇಲ್ಲದ ಕಾರಣ ಅಬಕಾರಿ ಕಾಯ್ದೆ ಕಲಂ 54 ರಡಿಯಲ್ಲಿ ಸ್ಥಳದಲ್ಲೆ ಶೋಧನ ಸಮುಚಿತ ಆಧಾರ ತಯಾರಿಸಿ ಮನೆಯನ್ನು ಪರಿಶೀಲಿಸಿದಾಗ ಮನೆಯ ಒಳಗೆ 15 ಲೀ ಸಾಮಾರ್ಥ್ಯದ 3 ಪ್ಲಾಸ್ಟಿಕ್ ಕೊಡದಲ್ಲಿ ತಲಾ 15 ಲೀ ನಂತೆ ಒಟ್ಟು 45 ಲೀ ನಷ್ಟು ಬೆಲ್ಲದ ಕೊಳೆ ಹಾಗೂ ಇನ್ನೊಂದು 2 ಲೀ ಸಾಮಾರ್ಥ್ಯದ ಪ್ಲಾಸ್ಟಿಕ್ ಬಾಟಲಿನಲ್ಲಿ 2 ಲೀ ನಷ್ಟು ಕಳ್ಳಭಟ್ಟಿ ಸರಾಯಿ ಇರುವುದು ಕಂಡುಬಂತು. ಅವುಗಳನ್ನು ಮನೆಯ ಮುಂಭಾಗಕ್ಕೆ ತೆಗೆದುಕೊಂಡು ಬಂದು ದೊರೆತ ಸ್ವತ್ತಿನಿಂದ 500 ಎಂ ಎಲ್ ಬಾಟಲಿಯಲ್ಲಿ 500 ಎಂ ಎಲ್ ನಷ್ಟು ಕಳ್ಳಭಟ್ಟಿ ಸಾರಾಯಿ ಹಾಗೂ 3 ಕೊಡಗಳ ಬೆಲ್ಲದ ಕೊಳೆಯಿಂದ ತಲಾ 500 ಎಂ ಎಲ್ ನಂತೆ 3 ಬಾಟಲಿಗಳಲ್ಲಿ ಮಾದರಿಗಾಗಿ ತೆಗೆದು, ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಇಲಾಖಾ ಸೀಲು ಕ್ರಮ 336 ನ್ನು ಜರುಗಿಸಲಾಯಿತು. ಮಹಜರ್ ಕ್ರಮವನ್ನು ಸಂಜೆ 4.30 ರಿಂದ 5.35 ಗಂಟೆಯವರೆಗೆ ಮಾಡಿರುತ್ತೇವೆ. ಆರೋಪಿಯನ್ನು ದಸ್ತಗಿರಿ ಮಾಡಿರುತ್ತೇವೆ.

3. ಸಾಕ್ಷಿಗೆ ಈಗ ಮಹಜರ್ ನ್ನು ತೋರಿಸಲಾಗಿದ್ದು ಸದರಿ ಮಹಜರ್ ನ್ನು ನಿಪಿ-1 ಎಂದು ಈಗಾಗಲೇ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-1 ಸಿ ಎಂದು ಗುರುತಿಸಲಾಯಿತು. ಮಾದರಿಗೆ ತೆಗೆದ ಬಾಟಲ್ ಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 4 ಪ್ಲಾಸ್ಟಿಕ್ ಬಾಟಲಿಗಳನ್ನು ನೋಡಿ ಗುರತಿಸಿರುತ್ತಾರೆ ಅದನ್ನು ಮು.ಮಾ-1 ರಿಂದ 4 ಎಂದು ಗುರುತಿಸಲಾಯಿತು. ದಾಳಿ ಸಮಯದಲ್ಲಿ ಹಾಜರಿದ್ದ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ವ್ಯಕ್ತಿ ಈ ದಿನ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ.

**ಃಃಪಾಟೀ ಸವಾಲುಃ ಆರೋಪಿ/ಗಳ ಪರ ವಕೀಲರಾದ ಶ್ರೀ ಕೆ ವಿ ಆರ್ ರವರಿಂದಃಃ**

ಸದರಿ ದಾಳಿ ಮಾಡಿದ ದಿನಾಂಕದಂದು ನಾನು ಬೇಲೂರು ವಲಯದಲ್ಲಿ ಕರ್ತವ್ಯದಲ್ಲಿದ್ದೆನು. ನಿಪಿ-1 ರ ಮಹಜರ್ ನಲ್ಲಿ ನಾನು ಹಾಸನದ ಕಚೇರಿ ಎಂದು ಬರೆದಿರುತ್ತೇನೆ ಎಂದರೆ ಸರಿ. ದಾಳಿಗೆ ನಾನು, ಚಾಸಾ-6 ಮತ್ತು ವಾಹನದ ಚಾಲಕ ರವಿ ಎಂಬುವವರು ಹೋದೆವು. ಮಾಹಿತಿ ಎಷ್ಟು ಗಂಟೆಗೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಮಾಹಿತಿ ಚಾಸಾ-6 ರವರಿಗೆ ಬಂದಿರುತ್ತದೆ. ನಾವು ಬೇಲೂರಿನಿಂದ ನೇರವಾಗಿ ದಬ್ಬೆ ಗ್ರಾಮಕ್ಕೆ ಹೋದೆವು. ಹಾಸನದ ಕಚೇರಿಯಿಂದ ಬೆಃ10.00 ಗಂಟೆಗೆ ಹೊರೆಟೆವು. ಹಾಸನದಿಂದ ಬಂದು ನಾನು ಯಾವ ಯಾವ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದೆನು ಎಂದು ಹೇಳಲು ಬರುವುದಿಲ್ಲ. ಹಾಸನದಿಂದ ನಾನು, ಚಾಸಾ-6 ಮತ್ತು ವಾಹನ ಚಾಲಕ ಬಂದಿದ್ದೆವು. ನಾವು ಬೇಲೂರಿನಿಂದ 3.30-3.45 ಕ್ಕೆ ಹೊರೆಟೆವು. ಬೇಲೂರಿನಿಂದ ದಬ್ಬೆ ಗ್ರಾಮಕ್ಕೆ ಸುಮಾರು 15-20 ಕಿಮೀ ಆಗುತ್ತದೆ. ಬೇಲೂರಿನಿಂದ ದಬ್ಬೆಗೆ 2-3 ಮಾರ್ಗಗಳಿದ್ದು ಯಾವ ಮಾರ್ಗದಿಂದ ಹೋದೆವು ಎಂದು ಗೊತ್ತಿಲ್ಲ. ಆರೋಪಿಯ ಮನೆ ಹಂಚಿನ ಮನೆಯದ್ದಾಗಿದ್ದು ಬಾಗಿಲು ಯಾವ ದಿಕ್ಕಿಗೆ ಇತ್ತು ಎಂದು ಗೊತ್ತಿಲ್ಲ. ಮನೆಯಲ್ಲಿ 2 ಕೋಣೆಗಳು ಇದ್ದಿರಬಹುದು. ಸ್ವತ್ತುಗಳ ಮನೆಯ ಹಾಲ್ ನಲ್ಲಿ ಇದ್ದವು. ಈ ಬಗ್ಗೆ ನಿಪಿ-1 ರ ಮಹಜರ್ ನಲ್ಲಿ ಬರೆದಿರುವುದಿಲ್ಲ. ಮನೆಯ ಒಳಗೆ ಮೊದಲು ನಾನು ಪ್ರವೇಶ ಮಾಡಿದ್ದು ನಂತರ ಚಾಸಾ-6 ರವರು ಮಾಡಿರುತ್ತಾರೆ. ನಂತರ ಪಂಚರು ಒಳಗೆ ಬಂದಿರುತ್ತಾರೆ. ನಿಪಿ-1 ರಲ್ಲಿ ಸಿಬ್ಬಂದಿಗಳು ಸ್ವತ್ತುಗಳನ್ನು ಮನೆಯಿಂದ ವಶಪಡಿಸಿಕೊಂಡು ಚಾಸಾ-6 ರವರ ಮುಂದೆ ಹಾಜರು ಪಡಿಸಿರುತ್ತಾರೆ ಎಂದು ಬರೆದಿದೆ ಎಂದರೆ ಸರಿ. ಪ್ಲಾಸ್ಟಿಕ್ ಬಾಟಲಿ ಬಿಳಿಯ ಬಣ್ಣದ್ದಾಗಿತ್ತು. 3 ಕೊಡಗಳು ಯಾವ ಬಣ್ಣದ್ದು ಎಂದು ಗೊತ್ತಿಲ್ಲ.

**2.** ನಿಪಿ-**1** ರ ಮಹಜರ್ ನ್ನು ಚಾಸಾ-**6** ರವರು ಬರೆದಿರುತ್ತಾರೆ. ಮನೆಯ ಚೆಕ್ಕುಬಂದಿ ಪೂರ್ವಕ್ಕೆ ಓಣಿ, ಪಶ್ಚಿಮಕ್ಕೆ ಹಿತ್ತಲುಇದ್ದು ಯಾರಿಗೆ ಸೇರಿದ್ದು ಎಂದು ಗೊತ್ತಿಲ್ಲ. ಉತ್ತರ-ದಕ್ಷಿಣ ದಿಕ್ಕಿಗೆ ಕಾಲಿ ಜಾಗ ಇದ್ದು ಕಾಲಿ ಜಾಗದ ನಂತರ ಇದ್ದ ಸ್ವತ್ತು ಯಾರಿಗೆ ಸೇರಿದ್ದು ಎಂದು ಗೊತ್ತಿಲ್ಲ.

**3.** ದಿಃ**03-12-2016** ರಂದು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ದಾಳಿ ಮಾಡಿರುವುದಿಲ್ಲ ಮತ್ತು ಯಾವುದೇ ಸ್ವತ್ತನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಸೇರಿದ ಯಾವುದೇ ಸ್ವತ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಮನೆಯಲ್ಲಿ ಇದ್ದನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ದಾಳಿ ಮಾಡಿದ ಮನೆಯ ನಂಬರ್ ಮತ್ತು ವಿದ್ಯುತ್ ಚಕ್ತಿ ಮೀಟರ್ ನಂಬರ್ ಹೇಳಲಾಗುವುದಿಲ್ಲ. ನಿಪಿ-**1** ರಲ್ಲಿ ಬರೆದಿರುವ ಬರವಣಿಗೆಯ ಅಕ್ಷರಗಳಿಗು ಮತ್ತು ಅದರಲ್ಲಿ ವಿಳಾಸ ಬರೆದಿರುವ ಬರವಣಿಗೆಯ ಅಕ್ಷರಗಳಿಗು ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ನಾವು ನಿಪಿ-**1** ನ್ನು ಇಲಾಖೆಯ ಕಚೇರಿಯಲ್ಲಿ ಬರೆದುಕೊಂಡು, ನಮ್ಮ ಇಲಾಖೆಗೆ ಸಂಬಂಧಿಸಿದ ಬಾಟಲ್ ಗೆ ಕಚೇರಿಯಲ್ಲಿ ಚೀಟಿ ಅಂಟಿಸಿಕೊಂಡು ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಯಾವುದೇ ದಾಳಿ ಮಾಡಿರುವುದಿಲ್ಲ ಮತ್ತು ಆರೋಪಿಯ ಗ್ರಾಮಕ್ಕೆ ಹೋಗದಿದ್ದರು ಮೇಲಾಧಿಕಾರಿಗಳ ಮಾತನ್ನು ಕೇಳಿಕೊಂಡು ಇಲಾಖಾ ಅಂಕಿಅಂಶಗಳಿಗೊಸ್ಕರ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಮುಮಾ **-1** ರಿಂದ **4** ಕ್ಕೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ. ಹೇ. ಕೇ. ಸರಿ. ಇದೆ

**(ಪ್ರಸನ್ನಕುಮಾರ್ ಸಿ.)**
**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**
**ಬೇಲೂರು.**